ಶ್ರೀ ಕೆ.ಎಚ್. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪ್ರಜಾಪ್ರಭುತ್ವದ ವಿಕೇಂದ್ರೀಕರಣದಡಿಯಲ್ಲಿ ಅನೇಕ ಅಧಿಕಾರಗಳನ್ನು ಮಂಡಲ ಪಂಚಾಯಿತಿಗಳು ಮತ್ತು ಜಿಲ್ಲಾಪರಿಷತ್ತುಗಳಿಗೆ ನೀಡಲಾಗಿದೆ. ಇದರಿಂದ ಆಯಾ ಪ್ರದೇಶದ ಅಭಿವೃದ್ಧಿಗಳ ಯೋಜನೆಗಳನ್ನು ತಯಾರಿಸಲು ಮತ್ತು ಫಲಾನುಭವಿಗಳನ್ನು ಗುರುತಿಸಲು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಕೂಲವಾಗುತ್ತದೆ.

2. ಈ ದಿಶೆಯಲ್ಲಿ ಕರ್ನಾಟಕವು ಯೋಜನೆಗಳನ್ನು ವರ್ಗಾವಣೆ ಮಾಡುವುದಲ್ಲದೆ ಅನೇಕ ಸಂಪನ್ಮೂಲಗಳನ್ನು ಮಂಡಲ ಪಂಚಾಯಿತಿ ಜಿಲ್ಲಾ ಪರಿಷತ್ತುಗಳಿಗೆ ನೀಡಿದೆ.

1) ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಅವುಗಳ ಬಾಬ್ತುಗಳು
2) ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ನಿರ್ದಿಷ್ಟಪಡಿಸಿರುವ ಯೋಜನೆಗಳು.
3) ಯೋಜನೇತರ ಅಡಿಯಲ್ಲಿ ನಿರ್ವಹಣೆಗಾಗಿ ಇರುವ ಅನುದಾನ
4) ಇದಲ್ಲದೆ ಕರ್ನಾಟಕ ಜಿಲ್ಲಾಪರಿಷತ್ ತಾಲ್ಲೂಕು ಪಂಚಾಯ್ತಿ ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯ್ತಿಗಳ ಅಧಿನಿಯಮ 1983ರ ಕಲಂ 114(3) ರನ್ವಯ 1981 ಜನಗಣತಿ ಆಧಾರದ ಮೇಲೆ ಮಂಡಲದ ವ್ಯಾಪ್ತಿಯಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಗೆ 10 ರೂ ದರದಲ್ಲಿ ತಲಾನುದಾನವನ್ನು ಕೊಡಲಾಗುತ್ತದೆ.
5) ಜಿಲ್ಲಾಪರಿಷತ್ ಕಾಯ್ದೆ ಕಲಂ 116ಕನ್ವಯ ಆಯಾ ಮಂಡಲ ಪಂಚಾಯಿತಿಗಳು ತೆರಿಗೆಗಳು ಮತ್ತು ಫೀಜುಗಳನ್ನು ವಸೂಲಿ ಮಾಡಿ ಮಂಡಲ ಪಂಚಾಯಿತಿಗಳ ವರಮಾನವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.
6) ಜಿಲ್ಲಾಪರಿಷತ್ ಕಾಯ್ದೆಯಲ್ಲಿ ಫೈನಾನ್ಸ್ ಕಮೀಷನ್‌ನ್ನು ರಚಿಸಿದ್ದು ಅದು ತನ್ನ ಶಿಫಾರಸ್ಸುಗಳನ್ನು ನೀಡಿದೆ. ಈ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

6) ರಾಜ್ಯದಲ್ಲಿ ಜಿಲ್ಲಾಪರಿಷತ್‌ಗಳಿಂದ ಸಣ್ಣಕೆರೆಗಳು ಮತ್ತು ಜಲಾಶಯಗಳ ನಿರ್ಮಾಣ

ಶ್ರೀ ಪಿ.ಸಿ. ಸಿದ್ದನಗೌಡರ್ : ರಾಜ್ಯದಲ್ಲಿ ಜಿಲ್ಲಾ ಪರಿಷತ್ತು ಬಂದನಂತರ ನಿರ್ಮಾಣ ಸಣ್ಣ ಕೆರೆಗಳು ಮತ್ತು ಜಲಾಶಯಗಳನ್ನು ರೂಪಿಸಲು ಎಷ್ಟು ಹೆಕ್ಟೇರ್ ಒಳಗಿರುವ ಪ್ರದೇಶವನ್ನು ನಿರ್ಮಿಸಲು ಕೊಟ್ಟಿದ್ದೀರಿ? ಈ ಯೋಜನೆಯನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಿಂದ ಹಿಂತಿರುಗಿ ಪಡೆಯುವ ಯೋಜನೆ ಸರ್ಕಾರಕ್ಕಿದೆಯೇ? ಯಾವಾಗ ಪಡೆಯುವಿರಿ?

ಶ್ರೀ ಕೆ.ಎಚ್. ಪಟೇಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ):

ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ 1983ರ ಕಾಯಿದೆಯಡಿಯಲ್ಲಿ ಹೊರಡಿಸಲಾದ ಸರ್ಕಾರದ ಆದೇಶಕ್ಕನುಗುಣವಾಗಿ 200ಹೆಕ್ಟೇರು ಅಚ್ಚುಕಟ್ಟಿನ ಒಳಗಿರುವ ಕೆರೆಗಳನ್ನು ನಿರ್ವಹಿಸಲು ಜಿಲ್ಲಾ ಪರಿಷತ್ತುಗಳಿಗೆ ವಹಿಸಿಕೊಡಲಾಗಿದೆ. ನಿರ್ವಹಣಾ ವೆಚ್ಚವನ್ನು ವಾರ್ಷಿಕ ಯೋಜನೆಯಲ್ಲಿ ನಿಗದಿಪಡಿಸಿದಂತೆ ಬಿಡುಗಡೆ ಮಾಡಲಾಗುತ್ತಿದೆ. ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳು ತಮ್ಮ ಆರ್ಥಿಕ ವ್ಯವಸ್ಥೆಗನುಗುಣವಾಗಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದೆ.

SRI A.M. HINDASGERI : The Hon'ble Home Minister may please furnish information on the following.

The action taken to rehabilitate the victims of Communi al violuance during October, November1990 and subsequent period, who lost their property, business, establishments, mango groves and other valuble immovable and moveable properties in our State.

ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು 1990 ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ನಡೆದ ಕೊಮುವಾರು ಗಲಭೆಗಳ ಬಗ್ಗೆ ವಿವರಗಳನ್ನು ಪಡೆಯಲು ಇಚ್ಚಿಸಿದ್ದಾರೆ. 1990ರ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನಡೆದ ಕೋಮುವಾರು ಗಲಭೆಗಳಲ್ಲಿ 77ವ್ಯಕ್ತಿಗಳು ಮೃತರಾಗಿದ್ದು 561ವ್ಯಕ್ತಿಗಳು ಗಾಯಗೊಂಡಿದ್ದಾರೆ. ಮೂವತ್ತೇಳು ಲಕ್ಷದ ಹತ್ತು ಸಾವಿರ ರೂಪಾಯಿಗಳನ್ನು ಮೃತರಾದವರ ಕುಟುಂಬದವರಿಗೂ ನಾಲ್ಕು ಲಕ್ಷ ಮೂವತ್ತೆಂಟು ಸಾವಿರದ ಒಂಬೈನೂರು ರೂಪಾಯಿಗಳನ್ನು ಗಾಯಗೊಂಡವರಿಗೂ ಪರಿಹಾರ ಧನವಾಗಿ ಕೊಟ್ಟಿದೆ. ಸುಮಾರು ಐದು ಕೋಟಿ ಮೂವತ್ತಾರು ಲಕ್ಷ ಎಂಭತ್ತೆರಡು ಸಾವಿರದ ಏಳುನೂರಾ ಎಪ್ಪತ್ತು ರೂಪಾಯಿಗಳಷ್ಟು ಬೆಲೆ ಬಾಳುವ ಆಸ್ತಿ ಪಾಸ್ತಿ ನಷ್ಟವಾಗಿದ್ದು ಇದಕ್ಕಾಗಿ ಒಂದು ಕೋಟಿ ಎಂಭತ್ತೈದು ಲಕ್ಷ ಹತ್ತು ಸಾವಿರದ ಎಪ್ಪತ್ತೆಂಟು ರೂಪಾಯಿಗಳ ಪರಿಹಾರ ಧನವನ್ನು ಸಹ ಕೊಟ್ಟಿದೆ. ಇದಲ್ಲದೆ 186 ಪೂಜಾ ಸ್ಥಳಗಳು ಸಹ ಹಾನಿಗೊಳಗಾಗಿದ್ದು ಈ ಕಟ್ಟಡಗಳ ರಿಪೇರಿಯನ್ನು ಕೈಗೊಂಡಿದ್ದು ಮುವತ್ತೇಳು ಲಕ್ಷ ಆರವತ್ನಾಲ್ಕು ಸಾವಿರದ ನೂರಾ ಇಪ್ಪತ್ನಾಲ್ಕು ರೂಪಾಯಿಗಳ ವೆಚ್ಚದಲ್ಲಿ 149 ಕಟ್ಟಡಗಳ ರಿಪೇರಿ ಕೆಲಸ ಈಗಾಗಲೇ ಪೂರೈಸಲ್ಪಟ್ಟಿದೆ. ಉಳಿದವು ರಿಪೇರಿಯ ವಿವಿಧ ಹಂತದಲ್ಲಿದ್ದು ಈ ಬಗ್ಗೆ ಸ್ಥಳೀಯವಾಗಿ ಇದ್ದ ತೊಡಕುಗಳನ್ನು ನಿವಾರಿಸಲಾಗುತ್ತಿದೆ.

ನಷ್ಟದ ಸಂದರ್ಭದಲ್ಲಿ ನಗದು ಪರಿಹಾರ ಕೊಡುವುದರ ಜೊತೆಗೆ 225 ನಷ್ಟಕ್ಕೊಳಗಾಗಿ ಕುಟುಂಬಗಳಿಗೆ ಮೂವತ್ತೊಂಭತ್ತು ಲಕ್ಷ ಮೂವತ್ತೊಂಭತ್ತು ಸಾವಿರದ ಎಂಟುನೂರಾ ನಲವತ್ತೆರಡು ರೂಪಾಯಿಗಳನ್ನು ಬಡ್ಡಿ ರಹಿತ ಸಾಲವನ್ನಾಗಿ ಕೊಡಲಾಗಿದೆ. ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಇನ್ನೂ 39 ಬಡ್ಡಿರಹಿತ ಸಾಲದ ಅರ್ಜಿಗಳನ್ನು ಪರಿಶೀಲಿಸುತ್ತಿದ್ದು 6 ಪ್ರಕರಣಗಳಲ್ಲಿ ಮಂಜೂರಾತಿ ನೀಡಿ 23 ಪ್ರಕರಣಗಳಲ್ಲಿ ತಮ್ಮ ಅರ್ಜಿಗಳನ್ನು ಅರ್ಜಿದಾರರೇ ವಾಪಸ್ ತೆಗೆದುಕೊಂಡಿದ್ದಾರೆಂದು ವರದಿಯಾಗಿದೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕು ಒಂದರಲ್ಲಿಯೇ ಹನ್ನೊಂದು ಸಾವಿರದ ಎಂಟನೂರಾ ಎಂಭತ್ತೇಳು ಮಾವಿನ ಗಿಡಗಳು ನಷ್ಟವಾಗಿದ್ದು ನಷ್ಟಕ್ಕೊಳಗಾದ 106 ಕುಟುಂಬಗಳಿಗೆ ಹನ್ನೆರಡು ಲಕ್ಷ ಮೂವತ್ತೊಂಭತ್ತು ಸಾವಿರದ ಎಂಟುನೂರಾ ಹದಿನೈದು ರೂಪಾಯಿಗಳನ್ನು ಪರಿಹಾರ ಧನವಾಗಿಯೂ ಹತ್ತು ಲಕ್ಷ ಹತ್ತೊಂಭತ್ತು ಸಾವಿರದ ತೊಂಭತ್ತೈದು ರೂಪಾಯಿಗಳನ್ನು ಬಡ್ಡಿರಹಿತ ಸಾಲವಾಗಿಯೂ ಈಗಾಗಲೇ ಕೊಡಲಾಗಿದ್ದು ಉಳಿದ ಇಪ್ಪತೆರಡು ಪ್ರಕರಣಗಳಲ್ಲಿ ತೋಟಗಾರಿಕೆ ಇಲಾಖೆಯ ನಿರ್ದೇಶಕರ ತಾಂತ್ರಿಕ ಅಭಿಪ್ರಾಯಕ್ಕಾಗಿ ಕಾಯಲಾಗುತ್ತಿದೆ. ಈ ಬಡ್ಡಿರಹಿತ ಸಾಲವನ್ನು ಮಂಜೂರು ಮಾಡಲು ಅನುಕೂಲವಾಗುವಂತೆ ದಿನಾಂಕ 15-7-91 ರಂದು ಈ ಅಧಿಕಾರವನ್ನು ಡಿವಿಷನ್ ಕಮಿಷನರ್ ಅವರಿಂದ ಜಿಲ್ಲಾಧಿಕಾರಿಗಳಿಗೆ ಕೊಡಲಾಗಿದೆ.

ಈ ಕೋಮುವಾರು ಗಲಭೆಗಳಲ್ಲಿ ಮನೆಗಳನ್ನು ಕಳೆದುಕೊಂಡು ರಾಮನಗರ ಚನ್ನಪಟ್ಟಣ ಮತ್ತು ಹೊಸದುರ್ಗ ತಾಲ್ಲೂಕಿನ ಮಲ್ಲಪ್ಪನಹಳ್ಳಿ ಗ್ರಾಮಗಳಲ್ಲಿ ಮನೆ

ಕಟ್ಟಿಸಿಕೊಡಲು ನಲವತ್ತಾರು ಲಕ್ಷ ಅರವತ್ತು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು ರಾಮನಗರದಲ್ಲಿ 45 ಚನ್ನಪಟ್ಟಣದಲ್ಲಿ 150 ಹಾಗೂ ಮಲ್ಲಪ್ಪನಹಳ್ಳಿಯಲ್ಲಿ 38 ಗೃಹ ನಿರ್ಮಾಣಗಳ ಕಾರ್ಯ ಪೂರ್ಣಗೊಳ್ಳುವ ಹಂತದಲ್ಲಿದೆ. ಈ ಸಂದರ್ಭದಲ್ಲಿ ಪೋಲೀಸರಿಂದ ಮಾಡಲಾಗಿದ್ದ ಮೊಕದ್ದಮೆಗಳನ್ನು ಸಹ ಪುನರ್‌ಪರಿಶೀಲಿಸಲು ತೀರ್ಮಾನ ಕೈಗೊಂಡು ಡಿ.ಜಿ.ಪಿ. ಹೋಮ್ ಗಾರ್ಡ್ಸ್‌ನ ಕಮಾಂಡಂಟ್ ಜನರಲ್ ಅವರಾದ ಶ್ರೀ ರಘುರಾಮನ್ ಅವರ ನೇತೃತ್ವದ ಪರಿಶೀಲನೆಗೆ ಒಪ್ಪಿಸಲಾಗಿದ್ದು ಅವರಿಂದ ವರದಿ ಬಂದಕೂಡಲೇ ಈ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳಲು ಸೂಕ್ತ ನಿರ್ಧಾರ ಕೈಗೊಳ್ಳುವ ವಿಚಾರವಾಗಿ ಆಲೋಚಿಸಲಾಗುತ್ತಿದೆ.

ಈ ಗಲಭೆಗಳಲ್ಲಿ ಮೃತವಾದವರ ಕುಟುಂಬದ ಪೈಕಿ ಒಬ್ಬರಿಗೆ ಉದ್ಯೋಗ ದೊರಕಿಸಿಕೊಡುವ ಬಗ್ಗೆಯೂ ಸಹ ಕಾನೂನಿನ ತೊಡಕುಗಳನ್ನು ಸರಿಪಡಿಸಲು ಆಡಳಿತ ಸುದಾವರಣೆ ಮತ್ತು ಸಿಬ್ಬಂಧಿ ಇಲಾಖೆ ಹಾಗೂ ಕಾನೂನು ಇಲಾಖೆಗಳ ಜೊತೆ ಸಮಾಲೋಚನೆ ಮುಂದುವರೆದಿದೆ. ಈ ಎಲ್ಲ ಕಾರ್ಯಕ್ರಮಗಳನ್ನೂ ಸಚಿವ ಸಂಪುಟದ ಉಪ ಸಮಿತಿಯೊಂದು ಕಾಲಕಾರಕ್ಕೆ ಸೇರಿ ಶೀಘ್ರ ಪರಿಹಾರ ಒಗಿಸಲು ಅಗತ್ಯ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ

2.45 ಪಿ.ಎಂ.

8) ನಾಗಮಂಗಲ ತಾಲ್ಲೂಕಿನ ಸರ್ಕಾರಿ ಜೂನಿಯರ್ ಕಾಲೇಜ್ ಮತ್ತು ದೇವಲಾಪುರ ಹೈಸ್ಕೂಲ್ ಹಾಗೂ ಬೆಳ್ಳೂರಿನ ಜೂನಿಯರ್ ಕಾಲೇಜಿನಲ್ಲಿ ಅಧ್ಯಾಪಕರುಗಳ ಕೊರತೆ ಮತ್ತು ನೇಮಕಾತಿ

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ನಾಗಮಂಗಲ ತಾಲ್ಲೂಕಿನ (1) ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಕೆಮಿಸ್ಟ್ರಿ ಉಪನ್ಯಾಸಕರು ಮತ್ತು ಕನ್ನಡ ಉಪನ್ಯಾಸಕರು ಇಲ್ಲದೇ ಇದ್ದು ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದ್ದು ಶೀಘ್ರ ನೇಮಕ ಮಾಡಬೇಕೆಂದು ಒತ್ತಾಯಿಸುತ್ತೇನೆ. ಮತ್ತು (2) ದೇವಲಾಪುರ ಹೈಸ್ಕೂಲ್‌ನಲ್ಲಿ ಖಾಲಿ ಇರುವ ವಿಜ್ಞಾನ ಉಪಾಧ್ಯಾಯರನ್ನು ನೇಮಿಸಬೇಕೆಂದು ಒತ್ತಾಯಿಸುತ್ತೇನೆ. (3) ಬೆಳ್ಳೂರ್ ನಲ್ಲಿರುವ ಗರ್ಲ್ಸ್ ಹೈಸ್ಕೂಲ್‌ನಲ್ಲಿ 360 ವಿದ್ಯಾರ್ಥಿನಿಯರಿದ್ದು ಒಬ್ಬರೇ ಉಪಾಧ್ಯಾಯರಿದ್ದು ಶೀಘ್ರ ಉಪಾಧ್ಯಾಯರುಗಳನ್ನು ನೇಮಕ ಮಾಡಬೇಕೆಂದು ಒತ್ತಾಯಿಸುತ್ತೇನೆ. (4) ಬೆಳ್ಳೂರು ಜೂನಿಯರ್ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕರು ಇರುವುದಿಲ್ಲ. ಆದ್ದರಿಂದ ಈ ಮೇಲ್ಕಂಡ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜುಗಳ ಬಗ್ಗೆ ಉಪಾಧ್ಯಾಯರುಗಳು ಮತ್ತು ಉಪನ್ಯಾಸಕರ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ನಾಗಮಂಗಲ ತಾಲೂಕಿನ ನಾಗಮಂಗಲ ಸರ್ಕಾರಿ ಜೂನಿಯರ್ ಕಾಲೇಜ್ ಮತ್ತು ದೇವಲಾಪುರ ಹೈಸ್ಕೂಲ್ ಹಾಗೂ ಬೆಳ್ಳೂರಿನ ಜೂನಿಯರ್ ಕಾಲೇಜಿನಲ್ಲಿ ಅಧ್ಯಾಪಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಮೇಲ್ಕಂಡ ಶಾಲೆಗಳಲ್ಲಿ ಒಟ್ಟು 5 ಮಂದಿ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ರಾಜ್ಯದಲ್ಲಿರುವ ಪ್ರೌಢಶಾಲಾ ಸಹಾಯಕ ಶಿಕ್ಷಕರ ಖಾಲಿ ಹುದ್ದೆಗಳಲ್ಲಿ ಶೇಕಡ 25ರಷ್ಟನ್ನು ವಿದ್ಯಾರ್ಹತೆಯುಳ್ಳ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡಿ ತುಂಬಲು ಹಾಗೂ ಶೇಕಡ 40ರಷ್ಟನ್ನು ಮಿತವೇತನ (ಸ್ಟೈಪಂಡರಿ) ಪದವೀಧರರಿಂದ ತುಂಬಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಈ